# ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ

**ಸುತ್ತೂರು, ಮಾ–22:** ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳು ಜರುಗಿದವು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು ಅಲ್ಲಮಪ್ರಭು ದೇವರ ವಚನಗಳ ವೈಶಿಷ್ಟ್ಯವನ್ನು ಕುರಿತು ಉಪನ್ಯಾಸ ನೀಡುತ್ತಾ, ಅಲ್ಲಮಪ್ರಭುಗಳು ಮೇರು ವ್ಯಕ್ತಿತ್ವವನ್ನು ಹೊಂದಿದ್ದು ಯಾವುದೇ ವಿಚಾರಗಳನ್ನು ವಿಮರ್ಶೆ ಮಾಡದೆ ಒಪ್ಪಿಕೊಳ್ಳುತ್ತಿರಲಿಲ್ಲ. ವಚನದಲ್ಲಿ ಅಂತರಂಗದ ತೊಳಲಾಟ, ಆತಂಕ ಇರುವುದಿಲ್ಲ, ಆತ್ಮ ವಿಶ್ವಾಸದಿಂದ ಸ್ಥಿತಿ ಸಿದ್ಧಾಂತಗಳು ಇರುವುದನ್ನು ನಾವು ಕಾಣುತ್ತೇವೆ. ಗಹನವಾದ ಆಧ್ಯಾತ್ಮ, ತಾತ್ವಿಕ ವಿಚಾರಗಳು ವಚನಗಳಲ್ಲಿ ಇರುತ್ತವೆ. ಅಲ್ಲಮ್ಮನ ಆಧ್ಯಾತ್ಮಿಕ ಅನುಭವಗಳ ಅಸಮಾನ್ಯತೆಯಿಂದ ಅವರ ವಚನಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಅವರದ್ದು ಬಹುಮಟ್ಟಿಗೆ ರೂಪಕ ಭಾಷೆಯಾಗಿದೆ. ಅವರ ಕೃತಿಗಳು ಎಲ್ಲಾ ರೀತಿಯ ಜ್ಞಾನಕ್ಕೆ ದಾರಿದೀಪವಾಗಿವೆ. ಮನಸ್ಸು ಶುದ್ಧಿ ಇಲ್ಲದ ಮೇಲೆ ಲಿಂಗಪೂಜೆಯನ್ನು ಮಾಡಿದರೆ ಏನು ಫಲ ಎಂದು ಹೇಳುವ ಮೂಲಕ ಆಡಂಬರದ ಆಚರಣೆ ಮಾಡುವುದನ್ನು ಒಪ್ಪುತ್ತಿರಲಿಲ್ಲ. ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಕಾಣಾ ಗುಹೇಶ್ವರ. ಮನುಷ್ಯನನ್ನು ಆಸೆ ಸೆಳೆಯುತ್ತದೆ ಆದರೆ ಅದನ್ನು ಅಳಿಯಬೇಕು ಎಂದು ತಿಳಿಸಿದರು.

ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವು ರಾಷ್ಟ್ರೀಯ ಪಂಚಾಂಗದ ವಿವರಗಳನ್ನು ಒಳಗೊಂಡಿದೆ. ಈ ವರ್ಷ ಅಧಿಕ ಮಾಸವು ಶ್ರಾವಣ ಮಾಸದಲ್ಲಿ ಬರುತ್ತದೆ. ಶ್ರಾವಣ ಮಾಸವು ಅತ್ಯಂತ ಶ್ರೇಷ್ಠವಾದ ಮಾಸವಾಗಿದೆ ಎನ್ನುತ್ತಾ ರಾಶಿ ಫಲಗಳ ಬಗ್ಗೆ ತಿಳಿಸಿದರು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ಹೊರಟು ಜಮೀನುಗಳಿಗೆ ತೆರಳಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಲಾಯಿತು. ಕರ್ತೃಗದ್ದುಗೆ ಹಾಗೂ ಶ್ರೀಕ್ಷೇತ್ರದ ಎಲ್ಲಾ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಇದೇ ಸಂದರ್ಭದಲ್ಲಿ 25ಕ್ಕೂ ಹೆಚ್ಚು ವಟುಗಳು ದೀಕ್ಷಾ ಸಂಸ್ಕಾರ ಪಡೆದರು. ಜೆಎಸ್ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳಾದ ಕು. ಕೆ. ಪ್ರವೀಣ್ ಆಚಾರ್ ಕೊಳಲು ವಾದನ ನುಡಿಸಿದನು, ಕು. ಯತೀಶ್ ತಬಲಸಾತ್ ನೀಡಿದನು.

ಶ್ರೀ ನೀಲಕಂಠಸ್ವಾಮಿ ಮಠದ ಶ್ರೀಗಳು, ಕುಂದೂರು ಮಠದ ಶ್ರೀಗಳು, ಚುಂಚನಹಳ್ಳಿ ಮಠದ ಶ್ರೀಗಳು, ಹೊನ್ನಲಗೆರೆ ಮಠದ ಶ್ರೀಗಳು, ಪಂಚಗವಿ ಮಠದ ಶ್ರೀಗಳು, ಕಳ್ಳೀಮಠ ಮಠದ ಶ್ರೀಗಳು, ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಉದ್ಯಮಿಗಳಾದ ಶ್ರೀ ರಘು ಆಚಾರ್ ಮತ್ತು ಕುಟುಂಬ ವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಜೆಎಸ್ಎಸ್ ಉಚಿತ ಶಾಲೆ ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಪಂಚಾಕ್ಷರಿ. ಬಿ. ಆರ್ ವಂದಿಸಿದರು.

ಆಡಳಿತಾಧಿಕಾರಿಗಳು



ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಹತ್ತಾರು ಜೋಡಿ ಅಲಂಕೃತ ಹೊನ್ನೇರುಗಳ ಮೆರವಣಿಗೆ ಶ್ರೀಮಠದಿಂದ ಹೊರಟು ಕರ್ತೃ ಗದ್ದಿಗೆಯ ಮೂಲಕ ಜಮೀನುಗಳಿಗೆ ತೆರಳಿ ಹೊಸ ಕೃಷಿ ಕಾರ್ಯಕ್ಕೆ ಚಾಲನೆ ನೀಡಲಾಯಿತು. ವಿವಿಧ ಕಲಾ ತಂಡಗಳವರು ಪಾಲ್ಗೊಂಡಿದ್ದರು



ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮ ಜರುಗಿತು. ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಉಪನ್ಯಾಸ ನಡೆಸಿಕೊಟ್ಟ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು, ಪಂಚಾಂಗ ಕರ್ತರಾದ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಹಾಗೂ ಮೊದಲಾದವರಿದ್ದಾರೆ.



ಯುಗಾದಿ ಹಬ್ಬದ ಸಂದರ್ಭದಲ್ಲಿ ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರು
ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೊಂದಿಗೆ ಲಿಂಗದೀಕ್ಷೆ ಪಡೆದ ವಟುಗಳು.
ಚಿತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ
ಶ್ರೀ ಎಸ್.ಪಿ. ಮಂಜುನಾಥ್‌ರವರು ಹಾಗೂ ಮೊದಲಾದವರಿದ್ದಾರೆ.